ಕರ್ನಾಟಕ ಸರ್ಕಾರ

ಸಾರ್ವಜನಿಕ ಶಿಕ್ಷಣ ಇಲಾಖೆ

ಆಯುಕ್ತರ ಕಛೇರಿ, ಹೊಸ ಸಾರ್ವಜನಿಕ ಕಛೇರಿಗಳು, ನೃಪತುಂಗ ರಸ್ತೆ, ಬೆಂಗಳೂರು-01

ಮೋ:080 22291847

Email-ID-22291847ddpipe@gmail.com

ದಿನಾಂಕ:19-03-2011

ಸಂಖ್ಯೆ:ದೈಶಿ.76.ವಿ.ಕ್ರಿ.ನಿ.ದೈಶಿ ಸಭೆ/2010

# ಜ್ಞಾಪನ

ವಿಷಯ: ದೈಹಿಕ ಶಿಕ್ಷಣ ಅಧಿಕಾರಿಗಳ ಕಾರ್ಯಾಗಾರವನ್ನು ಆಯೋಜಿಸುತ್ತಿರುವ ಬಗ್ಗೆ.

@@@@

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ತಾಲ್ಲೂಕು ದೈಹಿಕ ಶಿಕ್ಷಣ ಪರಿವೀಕ್ಷಕರುಗಳಿಗೆ ಸರ್ಕಾರವು ಬಿ ಹುದ್ದೆಯ ವೇತನವನ್ನು ನಿಗಧಿಪಡಿಸಲು ಈಗಾಗಲೇ ಮಹಾಲೇಖಪಾಲಕರಿಗೆ ಆದೇಶ ನೀಡಿದೆ. ಹಾಗೂ ಇನ್ನು ಮುಂದೆ ಎಲ್ಲಾ ದೈಹಿಕ ಶಿಕ್ಷಣ ಪರಿವೀಕ್ಷಕರು ತಮ್ಮ ಕರ್ತವ್ಯವನ್ನು ಹೆಚ್ಚು ಪರಿಣಾಮಕಾರಿಯಾಗಿ ನಿರ್ವಹಿಸಲು ಅನುಕೂಲವಾಗುವಂತೆ 4 ವಿಭಾಗಗಳಲ್ಲಿ ದೈಹಿಕ ಶಿಕ್ಷಣ ಅಧಿಕಾರಿಗಳ ಕಾರ್ಯಾಗಾರವನ್ನು ಈ ಕೆಳಕಂಡ ದಿನಾಂಕಗಳಂದು ಆಯೋಜಿಸಲಾಗಿದೆ.

| ಕ್ರ.ಸಂ | ದಿನಾಂಕ | ವಿಭಾಗ | ಕಾರ್ಯಾಗಾರ ನಡೆಸುವ ಸ್ಥಳ |
|---|---|---|---|
| 1. | 24-03-2011 | ಬೆಂಗಳೂರು ವಿಭಾಗ | ಸಾಹಸ ಅಕಾಡೆಮಿ ಯ ಸಭಾಂಗಣ, ಹೊನ್ನೆಮರಡು ಸಾಗರ ತಾ .ಶಿವಮೊಗ್ಗ ಜಿಲ್ಲೆ |
| 2. | 26-03-2011 | ಬೆಳಗಾಂ ವಿಭಾಗ | ಲಯೋಲ ಪ್ರೌಢಶಾಲೆ ಬೆಟಗೇರಿ ಗದಗ ಜಿಲ್ಲೆ |
| 3. | 28-03-2011 | . ಗುಲ್ಬರ್ಗ ವಿಭಾಗ | ಕೆ.ಪಿ.ಟಿ.ಸಿ.ಎಲ್-ಡಿಎವಿ ಪ್ರೌಢಶಾಲೆ ಶಕ್ತಿ ನಗರ , ರಾಯಚೂರು |
| 4. | 30-03-2011 | ಮೈಸೂರು ವಿಭಾಗ | ಕ್ರಮುಖ ಪ್ರೌಢಶಾಲೆ, ಬೀರೂರು, ಚಿಕ್ಕಮಗಳೂರು ಜಿಲ್ಲೆ |

ಈ ಕಾರ್ಯಾಗಾರಗಳು ಆಯಾ ದಿನ ಬೆಳಿಗ್ಗೆ 8-30 ರಿಂದಲೇ ಪ್ರಾರಂಭವಾಗಿ ಸಂಜೆ 6-00 ಗಂಟೆಯವರೆಗೂ ನಡೆಸಲಾಗುವುದು. ಆದುದರಿಂದ ಆಯಾ ವಿಭಾಗದ ದೈಹಿಕ ಶಿಕ್ಷಣ ಅಧಿಕಾರಿಗಳಾದ ಜಿಲ್ಲಾ ದೈಹಿಕ ಶಿಕ್ಷಣ ಅಧೀಕ್ಷಕರು ಮತ್ತು ತಾಲ್ಲೂಕು ದೈಹಿಕ ಶಿಕ್ಷಣ ಪರಿವೀಕ್ಷಕರು ಕಾರ್ಯಾಗಾರಕ್ಕೆ ಯಾವುದೇ ವೈಯಕ್ತಿಕ ಹಾಗೂ ಆಡಳಿತಾತ್ಮಕ ಕಾರಣಗಳನ್ನು ನೀಡದೇ ಹಾಜರಾಗುವುದು. ಅವರುಗಳನ್ನು ಆಯಾ ಜಿಲ್ಲಾ ಉಪನಿರ್ದೇಶಕರು ಆಡಳಿತ ಮತ್ತು ಕ್ಷೇತ್ರಶಿಕ್ಷಣಾಧಿಕಾರಿಗಳು ಈ ಬಗ್ಗೆ ಸೂಕ್ತ ಸೂಚನೆ ನೀಡಿ ಸಂಬಂಧಪಟ್ಟ ಅಧಿಕಾರಿಗಳನ್ನು ಕರ್ತವ್ಯದಿಂದ ಬಿಡುಗಡೆಗೊಳಿಸಿ ಸಮಯಕ್ಕೆ ಸರಿಯಾಗಿ ಹಾಜರಾಗುವಂತೆ ಕ್ರಮಕೈಗೊಳ್ಳಲು ತಿಳಿಸಿದೆ. ದೈಹಿಕ ಶಿಕ್ಷಣ ಪರಿವೀಕ್ಷಕರುಗಳು ಕಾರ್ಯಾಗಾರಕ್ಕೆ ಹಾಜರಾಗುವಾಗ 2010-2011ನೇ ಸಾಲಿನ ವಿದ್ಯಾರ್ಥಿ ಕ್ರೀಡಾನಿಧಿಯ ಮಾಹಿತಿಯನ್ನು ತರಲು ಸೂಚಿಸಿದೆ. ಜಿಲ್ಲಾ ದೈಹಿಕ ಶಿಕ್ಷಣ ಅಧಿಕಾರಿಗಳು 2010-2011ನೇ ಸಾಲಿನ ವಿದ್ಯಾರ್ಥಿ ಕ್ರೀಡಾನಿಧಿಯ ಸಂಗ್ರಹ ಹಾಗೂ ವೆಚ್ಚದ ವಿವರವನ್ನು ಕಡ್ಡಾಯವಾಗಿ ತರುವುದು.

**ಮಾನ್ಯ ಆಯುಕ್ತರವರ ಆದೇಶದ ಮೇರೆಗೆ**

ನಿರ್ದೇಶಕರು ಪ್ರೌ.ಶಿ

ಗೆ,

1.ರಾಜ್ಯದ ಎಲ್ಲಾ ಉಪನಿರ್ದೇಶಕರು (ಆಡಳಿತ) ಇವರಿಗೆ,

2.ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ

3.ಸಂಬಂಧಿಸಿದ ದೈಹಿಕ ಶಿಕ್ಷಣ ಅಧಿಕಾರಿಗಳಿಗೆ

4.ಸಂಬಂಧಿಸಿದ ದೈಹಿಕ ಶಿಕ್ಷಣ ಪರಿವೀಕ್ಷಕರುಗಳಿಗೆ,

ಪ್ರತಿಯನ್ನು ಮಾಹಿತಿಗಾಗಿ

1.ಅಪರ ಆಯುಕ್ತರು, ಧಾರವಾಡ ಮತ್ತು ಗುಲ್ಬರ್ಗ

2. ಆಪ್ತ ಕಾರ್ಯದರ್ಶಿಗಳು, ಆಯುಕ್ತರ ಆಪ್ತ ಶಾಖೆ, ಬೆಂಗಳೂರು

3.ನಿರ್ದೇಶಕರು ಪ್ರೌಢಶಿಕ್ಷಣ ಇವರ ಆಪ್ತ ಶಾಖೆಗೆ

4.ಕಛೇರಿ ಪ್ರತಿ